corrections and observations (25th Oct. 2009). You are free to make corrections and bring it to our notice. crtindia@yahoo.co.in

REGISTERED NO.DL (N) 04 / 0007 / 2003-09

# ಭಾರತದ ರಾಜಪತ್ರ The Gazette of India

**ಅಸಾಧಾರಣ EXTRAORDINARY[1]**

**ಭಾಗ / PART II – ಖಂಡ / Section I**

ಪ್ರಾಧಿಕಾರದಿಂದ ಪ್ರಕಟಿತ / PUBLISHED BY AUTHORITY

ಕ್ರಮ ಸಂಖ್ಯೆ / ಓಂ.39 ನವದೆಹಲಿ, ಗುರುವಾರ, ಆಗಸ್ಟ್ 27 29 /ಭಾದ್ರ, 1931

NEW DELHI, THURSDAY, AUGUST 27, 2009 / BHADRA 5, 1931

**MINISTRY OF LAW AND JUSTICE ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(Legislative Department / ಶಾಸನ ವಿಭಾಗ)**

*New Delhi, the 27th August ,2009 / Bhadra 5, 1931( Saka )/* ನವದೆಹಲಿ, ಗುರುವಾರ, ಆಗಸ್ಟ್ 27 29 / ಭಾದ್ರ, 1931 (ಶಕ)

The following Act of Parliament received the assent of the president on the 26th August, 2009 and is hereby published for general information.

ಸಂಸತ್‌ನ ಈ ಮುಂದಿನ ಕಾಯಿದೆಗೆ 2009ರ ಆಗಸ್ಟ್ 29ರಂದು ರಾಷ್ಟ್ರಾಧ್ಯಕ್ಷರ ಒಪ್ಪಿಗೆ ಸಿಕ್ಕಿದ್ದು ಈ ಮೂಲಕ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

## THE RIGHT OF CHILDREN TO FREE AND COMPULSORY EDUCATION ACT,2009

## ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆ, 2009

**NO. 35 OF 2009 / ಕ್ರಮ ಸಂಖ್ಯೆ 2009ರ 35**

[26th August,2009]

[26 ಆಗಸ್ಟ್ 2009]

An Act to provide for free and compulsory education to all children of the age of six to fourteen years.

ಆರರಿಂದ ಹದಿನಾಲ್ಕು ವರ್ಷದ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲು ಕಾಯಿದೆ.

Be it enacted by parliament in the sixtieth Year of the Republic of India as follows:-

ಭಾರತ ಗಣರಾಜ್ಯದ 60ನೇ ವರ್ಷದಲ್ಲಿ ಸಂಸತ್‌ನಲ್ಲಿ ಕಾಯಿದೆಯಾಗಿ ಈ ಮುಂದಿನಂತೆ ರಚಿಸಲಾಗಿದೆ.

### CHAPTER-I / ಅಧ್ಯಾಯ – 1

### PRELIMINARY / ಪರಿಚಯ

**Short Title, extent and commencement**

**ಕಿರು ಶೀರ್ಷಿಕೆ, ವ್ಯಾಪ್ತಿ ಮತ್ತು ಆರಂಭ**

Short title, extend and commencemen.

**1.** *(1)* This Act may be called the Right of children to free and compulsory Education Act, 2009.

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆ, 2009 ಎಂದು ಈ ಕಾಯಿದೆಯನ್ನು ಹೆಸರಿಸಬಹುದು.

ಕಿರು ಶೀರ್ಷಿಕೆ , ವ್ಯಾಪ್ತಿ ಮತ್ತು ಆರಂಭ

[1] ಇದರಲ್ಲಿರುವ ಕನ್ನಡ ಅವತರಣಿಕೆ ಕೇವಲ ಕಾಯಿದೆಯ ಅನುವಾದವಷ್ಟೆ. ಅಧಿಕೃತ ಉಲ್ಲೇಖನಗಳನ್ನು ಮೂಲ ಕಾಯಿದೆಯಿಂದಲೇ ಮಾಡಬೇಕು. – ಅನುವಾದಕರು, ವಾಸುದೇವ ಶರ್ಮಾ ಮತ್ತು ಸತೀಶ್ ಜಿ.ಸಿ. ಚೈಲ್ಡ್ ರೈಟ್ಸ್ ಟ್ರಸ್ಟ್, 4606, 6ನೇ ಮಹಡಿ, ಹೈಪಾಯಿಂಟ್ 4, ಅರಮನೆ ರಸ್ತೆ, ಬೆಂಗಳೂರು 560001 ದೂ. 080 41138285 crtindia@yahoo.co.in

| | | |
|---|---|---|
| *(2)* | It shall extend to the whole of India except the state of Jammu Kashmir. | ಜಮ್ಮು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ಈ ಕಾಯಿದೆಯು ಅನ್ವಯಿಸುತ್ತದೆ. |
| *(3)* | It shall come into force on such date as the Central Government may, by notification in the Official Gazette, appoint. | ಕೇಂದ್ರ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಘೋಷಿಸಿ ನಿಗಧಿಪಡಿಸಿದ ದಿನದಿಂದ ಈ ಕಾಯಿದೆಯು ಜಾರಿಗೆ ಬರುತ್ತದೆ. |

| | | |
|---|---|---|
| **2.** | In this Act, unless the context otherwise requires,- | ವಿವಿಧ ಸಂದರ್ಭಗಳಲ್ಲಿ ಬೇರೆಯೇ ಅರ್ಥವನ್ನು ನೀಡದ ಹೊರತು ಈ ಕಾಯಿದೆಯಲ್ಲಿ ಈ ಮುಂದಿನ ಪದಗಳನ್ನು ಇಲ್ಲಿ ನಿಗಧಿಪಡಿಸಿರುವಂತೆ ಅರ್ಥೈಸಬೇಕು, – |
| *(a)* | "appropriate Government" means- | "ಸೂಕ್ತವಾದ ಸರ್ಕಾರ" ಎಂದರೆ – |
| | i) in relation to a school established, owned or controlled by the Central Government, or the administrator of the Union territory, having no legislature, the Central government; | i) ಸ್ಥಾಪಿತ ಶಾಲೆಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ಮಾಲೀಕತ್ವ ಅಥವಾ ನಿಯಂತ್ರಣದಲ್ಲಿರುವುದು, ಅಥವಾ ಕೇಂದ್ರಾಡಳಿತ ಪ್ರದೇಶದ ಆಡಳಿತಾಧಿಕಾರಿ, ಯಾವುದೇ ಕಾಯಿದೆ ಇಲ್ಲದಿದ್ದಲ್ಲಿ ಕೇಂದ್ರ ಸರ್ಕಾರ; |
| | ii) in relation to a school, other than the school referred to in sub clause *(i)*, established within the territory of –<br>(A) State, the state Government,<br>(B) Union territory, having legislature, the government of that Union territory; | ii) ಉಪ–ಸೆಕ್ಷನ್ *(i)* ಅನ್ನು ಹೊರತುಪಡಿಸಿ, ಈ ಮುಂದಿನ ಪ್ರದೇಶಗಳಲ್ಲಿ ಸ್ಥಾಪಿತವಾಗಿರುವ ಶಾಲೆಗಳಿಗೆ ಸಂಬಂಧಿಸಿದಂತೆ –<br>(A) ರಾಜ್ಯದಲ್ಲಿ ರಾಜ್ಯ ಸರ್ಕಾರ<br>(B) ಕೇಂದ್ರಾಡಳಿತ ಪ್ರದೇಶದಲ್ಲಿ ಪ್ರತ್ಯೇಕವಾದ ಕಾಯಿದೆಯಿದ್ದಲ್ಲಿ, ಅಲ್ಲಿನ ಸರ್ಕಾರ. |
| *(b)* | "capitation fee" means any kind of donation or contribution or payment other than the fee notified by the school; | "ಕ್ಯಾಪಿಟೇಷನ್ ಶುಲ್ಕ'ವೆಂದರೆ ಶಾಲೆಯಿಂದ ನಿಗಧಿಪಡಿಸಲಾಗಿರುವುದನ್ನು ಹೊರತುಪಡಿಸಿ ಯಾವುದೇ ರೀತಿಯ ಹಣ ಅಥವಾ ವಸ್ತುವಿನ ರೂಪದಲ್ಲಿ ತೆಗೆದುಕೊಳ್ಳುವ ದೇಣಿಗೆ ಅಥವಾ ಕೊಡುಗೆ. |
| *(c)* | "child" means a male or female child of the age of six to fourteen years; | "ಮಗು' ಎಂದರೆ ಆರರಿಂದ ಹದಿನಾಲ್ಕು ವರ್ಷದೊಳಗಿನ ಗಂಡು ಅಥವಾ ಹೆಣ್ಣು ಮಗು |
| *(d)* | "chid belongs to disadvantaged group" means a child belonging to the scheduled caste, the scheduled tribe, the socially & educationally backward class or such other group having disadvantage owing to social, cultural, economical, geographical, linguistic, gender or such other factor as may be specified by the appropriate Government, by notification; | "ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಗುಂಪುಗಳ ಮಗು" ಎಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳು ಅಥವಾ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಭೌಗೋಳಿಕ, ಭಾಷಾವಾರು, ಲಿಂಗ ಅಥವಾ ಮತ್ತಿತರ ಕಾರಣಗಳಿಂದಾಗಿ ಹಿಂದುಳಿದ ಗುಂಪುಗಳೆಂದು ಸೂಕ್ತ ಸರ್ಕಾರಗಳು ಅಧಿಸೂಚನೆಯಿಂದ ಗುರುತಿಸಿರುವ ಗುಂಪುಗಳ ಮಕ್ಕಳು. |
| *(e)* | "child belonging to weaker section " means a child belonging to such parent or guardian whose annual income is lower than the minimum limit specified by the appropriate Government, by notification; | "ದುರ್ಬಲ ವರ್ಗಗಳಿಗೆ ಸೇರಿದ ಮಗು" ಎಂದರೆ ಸೂಕ್ತ ಸರ್ಕಾರಗಳು ಅಧಿಸೂಚನೆಯಿಂದ ನಿಗಧಿಪಡಿಸಿರುವ ಕನಿಷ್ಟ ಮಟ್ಟಕ್ಕಿಂತಲೂ ಕಡಿಮೆ ಆದಾಯ ಹೊಂದಿರುವ ಪೋಷಕರು, ತಂದೆ–ತಾಯಿಯರ ಮಗು |
| *(f)* | "elementary education" the education from first class to eighth class; | "ಎಲಿಮೆಂಟರಿ ಶಿಕ್ಷಣ[2]' ಎಂದರೆ ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗಿನ ಶಿಕ್ಷಣ |
| *(g)* | "guardian", in relation to a child, means a person having the care & custody of that child & includes a natural guardian or guardian appointed or declared by a court or a statute; | "ಪೋಷಕ", ಎಂದರೆ ಒಂದು ಮಗುವಿಗೆ ಸಂಬಂಧಿಸಿದಂತೆ, ಆ ಮಗುವಿನ ಪೋಷಣೆ, ರಕ್ಷಣೆ ಹಾಗೂ ಸುಪರ್ದಿಯನ್ನು ನೋಡಿಕೊಳ್ಳುತ್ತಿರುವ ವ್ಯಕ್ತಿ ಮತ್ತು ಇದರಲ್ಲಿ ಸ್ವಾಭಾವಿಕ ತಂದೆ, ತಾಯಿ ಅಲ್ಲದೆ ಕಾನೂನಿನಂತೆ ನ್ಯಾಯಾಲಯವು ಪೋಷಕರೆಂದು ಘೋಷಿಸಿರುವ ವ್ಯಕ್ತಿ |

[2] "Elementary" – ಎಂಬುದಕ್ಕೆ ಸೂಕ್ತವಾದ ಪದ ಅರ್ಥ ದೊರೆಯದ ಕಾರಣದಿಂದಾಗಿ ಆ ಪದವನ್ನು ಹಾಗೆಯೇ ಉಳಿಸಿಕೊಂಡಿದ್ದೇವೆ.

(h) "local authority" means a Muncipal Corporation or Muncipal Council or Zilla Parishad or Nagar Panchayat or Panchayat, by whatever name called and includes such other authority or body having administrative control over the s e by or under any law for the time being in force to function as a local authority in any city,town or village ;

"ಸ್ಥಳೀಯ ಸರ್ಕಾರ" ಎಂದರೆ ಯಾವುದೇ ನಗರ, ಪಟ್ಟಣ ಅಥವಾ ಹಳ್ಳಿಯ ಸ್ಥಳೀಯ ಆಡಳಿತ ನೋಡಿಕೊಳ್ಳುವ ಜವಾಬ್ದಾರಿ ಇರುವ ಮುನಿಸಿಪಲ್ ನಗರ ಪಾಲಿಕೆ ಅಥವಾ ಮುನ್ಸಿಪಲ್ ಪುರಸಭೆ ಅಥವಾ ಜಿಲ್ಲಾ ಪರಿಷತ್ ಅಥವಾ ನಗರ ಪಂಚಾಯತ್ ಅಥವಾ ಪಂಚಾಯಿತಿ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲ್ಪಟ್ಟ ಆಡಳಿತ ವ್ಯವಸ್ಥೆ.

4 of 2006 (i) "National Commission for Protection of Child Rights" means the National Commission for Protection of Child Rights constituted under section 3 of the commissions for protection of child rights Act,2005;

2006ರ 4ನೆಯದು "ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗ" ಎಂದರೆ, ಮಕ್ಕಳ ಹಕ್ಕುಗಳ ರಕ್ಷಣೆಗಾರಿ ರಾಷ್ಟ್ರೀಯ ಆಯೋಗಗಳು ಕಾಯಿದೆ 2005ರ ಸೆಕ್ಷನ್ 3ರಂತೆ ರಚಿತವಾಗಿರುವ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಆಯೋಗ.

(j) "notification" means a notification published in the official gazette;

"ಪ್ರಕಟನೆ" ಎಂದರೆ, ಅಧಿಕೃತ ಗೆಜೆಟ್ / ಪ್ರಕಟನೆಯಲ್ಲಿ ಮಾಡಿರುವ ಸೂಚನೆ;

(k) "parent" means either the natural or step adoptive father or mother of a child.

"ಪೋಷಕ" ಎಂದರೆ, ಸ್ವಾಭಾವಿಕ ಅಥವಾ ಮಲ ತಂದೆ, ತಾಯಿ, ದತ್ತು ಪೋಷಕರು

(l) "prescribed" means prescribed by rules made under this Act.

"ಶಿಫಾರಸು ಮಾಡಿರುವ" ಎಂದರೆ, ಈ ಕಾಯಿದೆಯಡಿ ಮಾಡಿರುವ ನಿಯಮಗಳು;

(m) "Schedule" means the Schedule annexed to this Act;

"ಶೆಡ್ಯೂಲು" ಎಂದರೆ, ಈ ಕಾಯಿದೆಗೆ ಅನುಬಂಧವಾಗಿ ನೀಡಲಾಗಿರುವ ಶೆಡ್ಯೂಲುಗಳು;

(n) "School" means any recognized school imparting elementary education and includes-

i) a school established , owned or controlled by the government or a local authority;
ii) an aided school receiving aid or grants to meet whole or part of its expenses from the appropriate Government or the local authority;
iii) a school belonging to specified category
iv) an unaided school not receiving any kind of aid or grants to meet its expenses from the appropriate Government or local authority;

"ಶಾಲೆ" ಎಂದರೆ, ಎಲಿಮೆಂಟರಿ ಶಿಕ್ಷಣವನ್ನು ನೀಡುತ್ತಿರುವ ಯಾವುದೇ ಮಾನ್ಯತೆ ಪಡೆದಿರುವ ಶಾಲೆ ಮತ್ತು ಅದರಲ್ಲಿ ಈ ಮುಂದಿನವು ಇರಲೇಬೇಕು–

i) ಸ್ಥಳೀಯ ಸರ್ಕಾರ ಅಥವಾ ಸರ್ಕಾರವು ಸ್ಥಾಪಿಸಿರುವ, ಮಾಲೀಕತ್ವ/ಯಾಜಮಾನ್ಯ ಹೊಂದಿರುವ ಮತ್ತು ನಿಯಂತ್ರಣದಲ್ಲಿರುವ ಶಾಲೆ;
ii) ತನ್ನ ಸಂಪೂರ್ಣ ಅಥವಾ ಭಾಗಶಃ ಶಾಲಾ ಖರ್ಚುಗಳನ್ನು ಪೂರೈಸಲು ಸಂಬಂಧಿಸಿದ ಸರ್ಕಾರ ಅಥವಾ ಸ್ಥಳೀಯ ಸರ್ಕಾರದಿಂದ ನೆರವು ಪಡೆಯುತ್ತಿರುವ ಶಾಲೆ;
iii) ಪ್ರತ್ಯೇಕ ವರ್ಗೀಕರಣಕ್ಕೆ ಸೇರಿರುವ ಶಾಲೆ;
iv) ತನ್ನ ನಿರ್ವಹಣೆಗೆ ಸಂಬಂಧಿಸಿದ ಖರ್ಚುಗಳನ್ನು ಸರ್ಕಾರ ಅಥವಾ ಸ್ಥಳೀಯ ಸರ್ಕಾರದಿಂದ ಯಾವುದೆ ರೀತಿಯ ದೇಣಿಗೆ, ಸಹಾಯವನ್ನು ಪಡೆಯದಿರುವ ಶಾಲೆ

(o) "Screening procedures" means the method of selection for admission of a child, in preference over another than a random method;

"ಪರಿಶೀಲನಾ ಪ್ರಕ್ರಿಯೆ" ಎಂದರೆ, ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಲು ಮುಕ್ತ ವಿಧಾನವನ್ನು ಅನುಸರಿಸದೆ ಒಂದು ಮಗುವನ್ನು ಇನ್ನೊಂದು ಮಗುವಿಗಿಂತ ಹೊರತು ಪಡಿಸಿ ಸೇರಿಸಿಕೊಳ್ಳುವುದು;

(p) "Specified category", in relation to a school, means a school known as Kendriya Vidyalaya, Navodaya Vidyalaya, Sainik School or any other school having a distinct character which may be specified , by notification by the appropriate Government

"ವಿಶೇಷ ವರ್ಗ" ಎಂದರೆ, ಶಾಲೆಗೆ ಸಂಬಂಧಿಸಿದಂತೆ, ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ, ಸೈನಿಕ ಶಾಲೆ ಅಥವಾ ಇನ್ನಾವುದೇ ಶಾಲೆಯನ್ನು ಸರ್ಕಾರದ ಸೂಚನೆಯಂತೆ ವಿಶೇಷವಾದ ಲಕ್ಷಣಗಳಿಂದ ಗುರುತಿಸಬಹುದಾದ ಶಾಲೆಗಳು;

4 of 2006 (q) "State Commission for Protection of Child Rights" means the State Commission for Protection of Child Rights Act,2005.

"ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ರಾಜ್ಯ ಆಯೋಗ" ಎಂದರೆ, ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಆಯೋಗಗಳು ಕಾಯಿದೆ 2005ರ ಸೆಕ್ಷನ್ 3ರಂತೆ ನಿಯೋಜಿಸಲಾಗಿರುವ ಆಯೋಗಗಳು. 2006ರ 4ನೆಯದು

## CHAPTER II / ಅಧ್ಯಾಯ – II

## RIGHT TO FREE AND COMPULSORY EDUCATION / ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು

**3** Right of child to free and compulsory education

(1) Every child of the age of six to fourteen years shall have a right to free and compulsory education in a neighborhood school till completion of elementary education

ಆರರಿಂದ ಹದಿನಾಲ್ಕು ವರ್ಷದೊಳಗಿನ ಎಲ್ಲ ಮಕ್ಕಳು ತಮ್ಮ ನೆರೆಹೊರೆಯಲ್ಲೇ ಅವರ ಎಲಿಮೆಂಟರಿ ಶಿಕ್ಷಣವನ್ನು ಪೂರೈಸುವ ತನಕ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಹೊಂದುವ ಹಕ್ಕು ಹೊಂದಿರುವರು.

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು

(2) For the purpose of sub section (1), no child shall be liable to pay any kind of fee or charges or expenses which may prevent him or her from pursuing and completing the elementary education:

ಉಪ–ಸೆಕ್ಷನ್ *(1)* ರಲ್ಲಿ ಸೂಚಿಸಿರುವುದನ್ನು ಖಾತರಿ ಪಡಿಸಲೋಸುಗ, ಯಾವುದೇ ಮಗುವಿಗೆ ತನ್ನ ಎಲಿಮೆಂಟರಿ ಶಿಕ್ಷಣವನ್ನು ಪೂರೈಸಲು ಯಾವುದೇ ರೀತಿಯ ಶುಲ್ಕ, ಫೀ, ಚಾರ್ಜುಗಳು ಅಡ್ಡಿಯಾಗಬಾರದು.

Provided that a child suffering from disability, as defined in clause (i) of section 2 of the persons with Disabilities (Equal Opportunities, Protection and Full Participation) Act ,1996 shall have the right to pursue free and compulsory elementary education in accordance with the provisions of chapter V of the said Act.

ಅಂಗವಿಕಲತೆಯಿರುವ ವ್ಯಕ್ತಿಗಳ (ಸಮಾನ ಅವಕಾಶ, ರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಕಾಯಿದೆ 1996ರ ಸೆಕ್ಷನ್ 2ರ ಉಪ ವಿಭಾಗ (i)ರಲ್ಲಿ ವ್ಯಾಖ್ಯಾನಿಸಿರುವಂತೆ ಯಾವುದೇ ರೀತಿಯ ಅಂಗವಿಕಲತೆಯಿರುವ ಯಾವುದೇ ಮಗುವಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಈ ಕಾಯಿದೆಯ ಅಧ್ಯಾಯ 5ರಲ್ಲಿ ಸೂಚಿಸಿರುವಂತೆ ಪಡೆಯಲು ಹಕ್ಕಿದೆ.

**4** Special provisions for children not admitted to, or who have not completed elementary education

Where a child above six years of age has not been admitted in any school or through admitted, could not complete his or her elementary education, then ,he or she shall be admitted in a class appropriate to his or her age.

ಆರು ವರ್ಷ ದಾಟಿದ ಯಾವುದಾದರೂ ಮಗುವನ್ನು ಶಾಲೆಗೆ ಸೇರಿಸಿಲ್ಲದಿದ್ದಲ್ಲಿ ಅಥವಾ ಶಾಲೆಗೆ ಸೇರಿಸಿದ್ದರೂ ಆ ಮಗುವಿಗೆ ಎಲಿಮೆಂಟರಿ ಶಿಕ್ಷಣವನ್ನು ಪೂರ್ಣಗೊಳಿಸಲಾಗ ದಿದ್ದ ಪಕ್ಷದಲ್ಲಿ, ಅಂತಹ ಮಗುವನ್ನು ವಯಸ್ಸಿಗೆ ಸೂಕ್ತವಾದ ತರಗತಿಗೆ ಸೇರಿಸಬೇಕು.

ಶಾಲೆಗೆ ಸೇರಿಸಿಲ್ಲದ ಅಥವಾ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸದ ಮಕ್ಕಳಿಗೆ ವಿಶೇಷ ಅವಕಾಶಗಳು.

Provided that where a child is directly admitted in a class appropriate to his or her age, then, he or she shall, in order to be a par with others, have a right to receive special training in such manner, and within such time-limits, as may be prescribed:

ಆದರೆ, ಹೀಗೆ ಯಾವುದಾದರೂ ಮಗುವನ್ನು ನೇರವಾಗಿ ವಯಸ್ಸಿಗೆ ಅನುಗುಣವಾಗಿ ತರಗತಿಗೆ ಸೇರಿಸಿದ್ದ ಪಕ್ಷದಲ್ಲಿ, ಆ ಮಗು ತನ್ನ ವಾರಿಗೆಯವರ ಸಮಾವಾಗಿರಲು ವಿಶೇಷವಾದ ತರಬೇತಿಯನ್ನು ನಿರ್ದಿಷ್ಟ ಸಮಯದಲ್ಲಿ ಹೊಂದುವಂತೆ ಶಿಫಾರಸು ಮಾಡಬಹುದು.

Provided further that a child so admitted to elementary education shall be entitled to free education till completion of elementary education even after fourteen years.

ಈ ವಿಧವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶವನ್ನು ಹೊಂದಿದ ಮಕ್ಕಳು ತಮ್ಮ 14 ವರ್ಷದ ವಯಸ್ಸನ್ನು ಪೂರ್ತಿ ಮಾಡಿದ ಮೇಲೂ ಪ್ರಾಥಮಿಕ ಶಿಕ್ಷಣವನ್ನು ಪೂರ್ತಿ ಮಾಡುವವರೆಗೆ ಉಚಿತ ಶಿಕ್ಷಣವನ್ನು ಪಡೆಯುವ ಹಕ್ಕನು ಹೊಂದಿರುತ್ತಾರೆ.

**5** Right of transfer to other schools

(1) Where in a school, there is no provision for completion of elementary education, a child shall have a right to seek transfer to any other school, excluding the school specified in sub-clauses(iii) and (iv) of clause (n) of section 2, for completing his or elementary education.

ಯಾವುದಾದರೂ ಶಾಲೆಯಲ್ಲಿ ಮಕ್ಕಳಿಗೆ ಎಲಿಮೆಂಟರಿ ಶಿಕ್ಷಣವನ್ನು ಪೂರ್ಣಗೊಳಿಸಲು ಅವಕಾಶಗಳು ಇಲ್ಲದಿದ್ದ ಪಕ್ಷದಲ್ಲಿ, ಸೆಕ್ಷನ್ 2ರ (n)ರ ಉಪ–ಕ್ಲಾಸ್ (iii) ಮತ್ತು (iv) ರಲ್ಲಿ ಸೂಚಿಸಿರುವ ಶಾಲೆಗಳನ್ನು ಹೊರತು ಪಡಿಸಿ ಇತರ ಶಾಲೆಗಳಿಗೆ ವರ್ಗಾವಣೆ ಹೊಂದಿ ತನ್ನ ಶಿಕ್ಷಣವನ್ನು ಮುಂದುವರೆಸಿ ಪ್ರಾಥಮಿಕ ಶಿಕ್ಷಣವನ್ನು ಪೂರೈಸುವ ಹಕ್ಕನ್ನು ಮಕ್ಕಳು ಹೊಂದಿರುತ್ತಾರೆ.

ಬೇರೆ ಶಾಲೆಗಳಿಗೆ ವರ್ಗಾವಣೆ ಹೊಂದುವ ಹಕ್ಕು

(2) Where a child is required to move from one school to another, either within a state or outside, for any reason whatsoever, such child shall have a right to transfer to any other school, excluding the school specified in sub-clauses(iii) and (iv) of clause (n) of section 2, for completing his or elementary education.

ತನ್ನದೇ ರಾಜ್ಯದಲ್ಲಿ ಅಥವಾ ಹೊರ ರಾಜ್ಯಗಳಲ್ಲಿ ತನ್ನ ಯಾವುದೇ ಕಾರಣಕ್ಕೆ ಒಂದು ಶಾಲೆಯಿಂದ ಇನ್ನೊಂದು ಸಾಲೆಗೆ ವರ್ಗಾವಣೆ ಹೊಂದಬೇಕಾದಲ್ಲಿ, ಸೆಕ್ಷನ್ 2ರ (n)ರ ಉಪ–ಕ್ಲಾಸ್ (iii) ಮತ್ತು (iv) ರಲ್ಲಿ ಸೂಚಿಸಿರುವ ಶಾಲೆಗಳನ್ನು ಹೊರತು ಪಡಿಸಿ ಇತರ ಶಾಲೆಗಳಿಗೆ ವರ್ಗಾವಣೆ ಹೊಂದಿ ತನ್ನ ಶಿಕ್ಷಣವನ್ನು ಮುಂದುವರೆಸಿ ಎಲಿಮೆಂಟರಿ ಶಿಕ್ಷಣವನ್ನು ಪೂರೈಸುವ ಹಕ್ಕನ್ನು ಮಕ್ಕಳುಹೊಂದಿರುತ್ತಾರೆ.

(3) For seeking admission in such other schools, the head teacher or in-charge of the school where such child was last admitted, shall immediately issue the transfer certificate:

ಹೀಗೆ ಮಕ್ಕಳು ಬೇರೆ ಶಾಲೆಗಳಲ್ಲಿ ಪ್ರವೇಶವನ್ನು ಬಯಸಿದ್ದೇ ಆದಲ್ಲಿ, ಮಗು ಮೊದಲು ಪ್ರವೇಶ ಪಡೆದಿದ್ದ ಶಾಲೆಯ ಮುಖ್ಯ ಶಿಕ್ಷಕರು ಅಥವಾ ಆ ಶಾಲೆಯ ಜವಾಬ್ದಾರಿ ಹೊತ್ತಿರುವ ಶಿಕ್ಷಕರು ತಕ್ಷಣವೇ ವರ್ಗಾವಣೆ ಪತ್ರವನ್ನು ನೀಡಬೇಕು.

Provided that delay in producing transfer certificate shall not be a ground for either delaying or denying admission such other schools:

ವರ್ಗಾವಣೆ ಪತ್ರವನ್ನು ಪಡೆಯುವಲ್ಲಿ ತಡವಾಗುವುದು ಅಥವಾ ವರ್ಗಾವಣೆ ಪತ್ರವನ್ನು ನೀಡಲು ನಿರಾಕರಿಸುವುದರಿಂದ ಆಗುವ ತಡವನ್ನು ಕಾರಣವನ್ನಾಗಿಸಿ ಮಕ್ಕಳಿಗೆ ಯಾವುದೇ ಶಾಲೆಗೆ ಪ್ರವೇಶವನ್ನು ನಿರಾಕರಿಸಲಾಗದು.

Provided further that the head teacher or in-charge of the school delaying issuance of transfer certificate shall be liable for disciplinary action under the service rules applicable to him or her.

ಹೀಗೆ ಮಕ್ಕಳಿಗೆ ವರ್ಗಾವಣೆ ಪತ್ರ ಕೊಡುವುದಕ್ಕೆ ಯಾವುದಾದರೂ ಮುಖ್ಯ ಶಿಕ್ಷಕರು ಅಥವಾ ಶಾಲೆಯ ಜವಾಬ್ದಾರಿ ಹೊಂದಿರುವ ಶಿಕ್ಷಕರು ಕಾರಣವಿಲ್ಲದೆ ತಡ ಮಾಡಿದ್ದಲ್ಲಿ ಅಂತಹವರ ಮೇಲೆ ಸೇವಾ ನಿಯಮಗಳಂತೆ ಕ್ರಮ ಕೈಗೊಳ್ಳಲು ಅವಕಾಶಗಳಿದೆ.

## CHAPTER III / ಅಧ್ಯಾಯ – III

## DUTIES OF APPROPRIATE GOVERNMENT, LOCAL ATHORITY AND PARENTS

## ಸೂಕ್ತ ಸರ್ಕಾರಗಳು, ಸ್ಥಳೀಯ ಸರ್ಕಾರ ಮತ್ತು ಪೋಷಕರ ಕರ್ತವ್ಯಗಳು

**6.** Duty of appropriate Governemnt and local authority to establish schools / ಶಾಲೆ ಸ್ಥಾಪಿಸಲು ಸಂಬಂಧಿಸಿದ ಸ್ಥಳೀಯ ಸರ್ಕಾರಗಳ ಜವಾಬ್ದಾರಿ

For carrying out the provisions of this act, the appropriate government and local authority shall establish within such area or limits of neighborhood, as may be prescribed, a school, where it is not so established within a period of three years from the commencement of this act.

ಈ ಕಾಯಿದೆಯಲ್ಲಿರುವ ಅವಕಾಶಗಳನ್ನು ಜಾರಿ ಮಾಡಲೊ ನೆರೆಹೊರೆಯಲ್ಲಿ ಶಾಲೆಗಳು ಇಲ್ಲದಿದ್ದ ಪಕ್ಷದಲ್ಲಿ ಈ ಕಾಯಿದ ಜಾರಿಯಾದ ಮೂರು ವರ್ಷಗಳಲ್ಲಿ ಸೂಕ್ತ ಸರ್ಕಾರಗಳು ಆ ಸ್ಥಳೀಯ ಸರ್ಕಾರಗಳು ನಿರ್ದಿಷ್ಟವಾಗಿ ಸೂಚಿಸಿರುವ ರೀತಿಯಲ್ಲಿ ಶಾಲೆಯನ್ನು ಆರಂಭಿಸಬೇಕು.

**7.** Sharing of financial and other responsibilities. / ಸಂಪನ್ಮೂಲಗಳನ್ನು ಹಂಚಿಕೊಳ್ಳುವುದು ಮತ್ತಿತರ ಜವಾಬ್ದಾರಿಗಳು

*(1)* The Central Government and the State Governments shall have concurrent responsibility for providing funds for carrying out the provisions of this Act.

ಈ ಕಾಯಿದೆಯಲ್ಲಿರುವ ಅವಕಾಶಗಳನ್ನು ಜಾರಿ ಮಾಡುವ ಜವಾಬ್ದಾರಿಯನ್ನು ನಿರ್ವಹಿಸಲು ಬೇಕಾದ ಹಣಕಾಸುಗಳನ್ನು ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಮಾನವಾದ ಜವಾಬ್ದಾರಿ ಇರುತ್ತದೆ.

*(2)* The Central Government shall prepare the estimate of capital and recurring expenditure for the implementation of the provisions of the Act

ಈ ಕಾಯಿದೆಯ ಅವಕಾಶಗಳನ್ನು ನಿರ್ವಹಿಸಲು ಬೇಕಾದ ಮೂಲ ಧನ ಮತ್ತು ಪ್ರತಿ ವರ್ಷಕ್ಕೆ ಆವಶ್ಯಕವಿರುವ ಹಣದ ಪ್ರಮಾಣವನ್ನು ಕೇಂದ್ರ ಸರ್ಕಾರವು ಅಂದಾಜು ಮಾಡುತ್ತದೆ.

*(3)* The Central Government shall provide to the State Governments, as grants-in-aid of revenues, such percentage of expenditure referred to in sub-section (2) as it may determine, from time to time, in consultation with the State Governments.

ಈ ಉಪ–ಸೆಕ್ಷನ್ (2)ರಲ್ಲಿ ಸೂಚಿಸಿರುವಂತೆ ಖರ್ಚುವೆಚ್ಚಗಳನ್ನು ತೂಗಿಸಲು ಬೇಕಾದ ಪ್ರಮಾಣದ ಹಣವನ್ನು ಕೇಂದ್ರ ಸರ್ಕಾರವು ಕಾಲಕಾಕ್ಕೆ ರಾಜ್ಯ ಸರ್ಕಾರಗಳೊಡನೆ ಸಮಾಲೋಚನೆ ನಡೆಸಿ ನೆರವು ದೇಣಿಗೆ ರೂಪದಲ್ಲಿ ನೀಡುತ್ತದೆ.

*(4)* The Central Government may make a request to the President to make a reference to the Finance Commission under sub-clause (d) of clause (3) of article 280 to examine the need for additional resources to be provided to any State Government so that the said State Government may provide its share of funds for carrying out the provisions of the Act.

ಈ ಕಾಯಿದೆಯಲ್ಲಿರುವ ಅವಕಾಶಗಳನ್ನು ಜಾರಿ ಮಾಡಲು ತನ್ನ ಪಾಲಿನ ಹಣಕಾಸುಗಳನ್ನು ಹೊಂದಲು ಯಾವುದಾದರೂ ರಾಜ್ಯಕ್ಕೆ ಬೇಕಾದ ಅಧಿಕ ಮೊತ್ತದ ಸಂಪನ್ಮೂಲಗಳನ್ನು ಒದಗಿಸಲು ಸಂವಿಧಾನದ ಆರ್ಟಿಕಲ್ 280ರ ಕ್ಲಾಸ್ (3)ರ ಉಪ–ಕ್ಲಾಸ್ (d)ರಡಿಯಲ್ಲಿ ಹಣಕಾಸು ಆಯೋಗಕ್ಕೆ ಶಿಫಾರಸು ಮಾಡಲು ರಾಷ್ಟ್ರಪತಿಗಳಿಗೆ ಕೇಂದ್ರ ಸರ್ಕಾರವು ಬೇಡಿಕೆಯನ್ನು ಸಲ್ಲಿಸಬಹುದು.

*(5)* Notwithstanding anything contained in sub-section (4), the State Government shall, taking into consideration the sums provided by the Central Government to a State Government under sub-section (3), and its other resources, be responsible to provide funds for implementation of the provisions of the Act.

ಇಲ್ಲಿನ ಉಪ–ಸೆಕ್ಷನ್ (4)ರಲ್ಲಿ ಏನೇ ಹೇಳಿದ್ದರೂ, ರಾಜ್ಯ ಸರ್ಕಾರಗಳು ತನಗೆ ಸಬ್ ಸೆಕ್ಷನ್ (3)ರಲ್ಲಿ ಸೂಚಿಸಿರುವಂತೆ ಕೇಂದ್ರದಿಂದ ಬರುವ ನೆರವಿನ ಮೊತ್ತ ಹಾಗೂ ಇತರ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಈ ಕಾಯಿದೆಯಲ್ಲಿರುವ ಅವಕಾಶಗಳ ಜಾರಿಗಾಗಿ ಮಾತ್ರ ಬಳಸಲು ನೀಡಬೇಕು.

*(6)* The Central Government Shall –

(a) develop a framework of national curriculum with the help of academic authority specified under section 29;

(b) develop and enforce standards for training of teachers;

(c) provide technical support and resources to the State Government for promoting innovations, researches, planning and capacity building.

ಕೇಂದ್ರ ಸರ್ಕಾರವು –

(a) ಸೆಕ್ಷನ್ 29ರಲ್ಲಿ ನಿರ್ದಿಷ್ಟಪಡಿಸಿರುವಂತೆ ಶೈಕ್ಷಣಿಕ ಅಥಾರಿಟಿಯ ಸಹಾಯದಿಂದ ರಾಷ್ಟ್ರೀಯ ಶೈಕ್ಷಣಿಕ ಪ್ರನಾಳಿಕೆಯನ್ನು ಸಿದ್ಧಪಡಿಸಬೇಕು.

(b) ಶಿಕ್ಷಕರ ತರಬೇತಿಯಲ್ಲಿ ನಿರ್ದಿಷ್ಟವಾದ ವಿಧಿ ವಿಧಾನಗಳನ್ನು ಅಭಿವೃದ್ಧಿಪಡಿಸಿ ಅದನ್ನು ಜಾರಿ ಮಾಡಬೇಕು.

(c) ಶಿಕ್ಷಣದಲ್ಲಿ ನಾವೀನ್ಯತೆಯನ್ನು ತರಲು, ಸಂಶೋಧನೆ ಮತ್ತು ಯೋಜನೆ ಹಾಗೂ ಸಾಮರ್ಥ್ಯ ವೃದ್ಧಿ ಮಾಡಲು ತಾಂತ್ರಿಕ ಮತ್ತು ಸಂಪನ್ಮೂಲಗಳ ನೆರವನ್ನು ರಾಜ್ಯ ಸರ್ಕಾರಗಳಿಗೆ ನೀಡಬೇಕು.

| | | |
|---|---|---|
| **8.** | The appropriate Government shall – | ಸೂಕ್ತ ಸರ್ಕಾರಗಳು – |
| Duties of appropriate Government | | ಸಂಬಂಧಿಸಿದ ಸರ್ಕಾರದ ಜವಾಬ್ದಾರಿ |
| *(a)* | provide free and compulsory elementary education to every child:<br>Provided that where a child is admitted by his or her parents or guardian, as the case may be, in a school established, owned, controlled or substantially financed by funds provided directly or indirectly by the appropriate Government or a local authority, such child or his or her parents or guardian, as the case may be, shall not be entitled to make a claim for reimbursement of expenditure incurred on elementary education of the child in such other school.<br>*Explanation.-* The term "compulsory education" means obligation of the appropriate Government to –<br>*(i)* Provide free compulsory education to every child of the age of six to fourteen years; and<br>*(ii)* Ensure compulsory admission, attendance and completion of elementary education of every child of the age six to fourteen years | ಪ್ರತಿಯೊಂದು ಮಗುವಿಗೆ ಉಚಿತ ಮತ್ತು ಕಡ್ಡಾಯ ಎಲಿಮೆಂಟರಿ ಶಿಕ್ಷಣವನ್ನು ಒದಗಿಸುವುದು :<br>ಅಂದರೆ, ಯಾವುದೇ ತಂದೆ ತಾಯಿಯರು ಅಥವಾ ಪೋಷಕರು, ತಮ್ಮ ಮಗುವನ್ನು ಸಂಬಂಧಿಸಿದ ಸರ್ಕಾರ ಅಥವಾ ಸ್ಥಳೀಯ ಸರ್ಕಾರವು ಸ್ಥಾಪಿಸಿ ಅದರ ಸಂಪೂರ್ಣ ಸ್ವಾಮ್ಯವನ್ನು ಹೊಂದಿರುವ ಇಲ್ಲವೇ ನಿಯಂತ್ರಣದಲ್ಲಿರುವ, ಅಥವಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಣಕಾಸಿನ ನೆರವನ್ನು ನೀಡುತ್ತಿರುವ ಶಾಲೆಗೆ ಸೇರಿಸಿದ್ದಲ್ಲಿ, ಅಂತಹವರು ತಮ್ಮ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಮಾಡಿದ ವೆಚ್ಚವನ್ನು ಮರುಪಾವತಿ ಮಾಡಿ ಎಂದು ಸರ್ಕಾರವನ್ನು ಕೇಳುವಂತಿಲ್ಲ.<br>ವಿವರಣೆ – "ಉಚಿತ ಶಿಕ್ಷಣ"ವೆಂದರೆ ಸಂಬಂಧಿತ ಸರ್ಕಾರಕ್ಕೆ –<br>(1) ಆರರಿಂದ ಹದಿನಾಲ್ಕು ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವ ಜವಾಬ್ದಾರಿ ಇದೆ ಮತ್ತು<br>(2) ಆರರಿಂದ ಹದಿನಾಲ್ಕು ವರ್ಷದೊಳಗಿನ ಎಲ್ಲ ಮಕ್ಕಳು ಕಡ್ಡಾಯವಾಗಿ ಶಾಲಾ ದಾಖಲಾತಿ ಹೊಂದುವ, ಶಾಲೆಗೆ ಹಾಜರಾಗುವ ಮತ್ತು ಕಡ್ಡಾಯವಾಗಿ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಪೂರೈಸುವುದನ್ನು ಖಾತರಿಗೊಳಿಸುವ ಜವಾಬ್ದಾರಿ ಇದೆ. |
| *(b)* | Ensure availability of a neighbourhood school as specified in section 6; | ಸೆಕ್ಷನ್ 6ರಲ್ಲಿ ನಿರ್ದಿಷ್ಟ ಪಡಿಸಿರುವಂತೆ ನೆರೆಹೊರೆ ಶಾಲೆಗಳನ್ನು ಸ್ಥಾಪಿಸುವುದನ್ನು ಖಾತರಿಪಡಿಸುವುದು. |
| *(c)* | Ensure that the child belonging to weaker section and the child belonging to disadvantaged group are not discriminate against and prevented from pursuing and completing elementary education on any grounds; | ದುರ್ಬಲ ವರ್ಗಗಳು, ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತಿರುವ ಸಮೂಹಗಳ ಮಕ್ಕಳು ಯಾವುದೇ 'ಈತಿಯ ತಾರತಮ್ಯಕ್ಕೆ ಗುರಿಯಾಗುವುದಾಗಲಿ ಮತ್ತು ಅದರಿಂದಾಗಿ ಎಲಿಮೆಂಟರಿ ಶಿಕ್ಷಣವನ್ನು ಪೂರೈಸಲು ತೊಂದರೆಯಾಯಿತು ಎಂಬುದನ್ನು ನಿವಾರಿಸುವುದನ್ನು ಖಾತರಿ ಪಡಿಸಿಕೊಳ್ಳಬೇಕು. |
| *(d)* | Provide infrastructure including school building, teaching staff and learning equipment; | ಪಾಠಶಾಲೆಗೆ ಬೇಕಾದ ಕಟ್ಟಡ, ಶಿಕ್ಷಕ ವೃಂದ, ಕಲಿಕೆಯ ಸಾಮಗ್ರಿಗಳೇ ಮೊದಲಾದ ಮೂಲ ಸೌಕರ್ಯಗಳನ್ನು ಶಾಲೆಗಳಿಗೆ ಒದಗಿಸಬೇಕು. |
| *(e)* | Provide special training facility specified in section 4; | ಸೆಕ್ಷನ್ 4ರಲ್ಲಿ ನಿರ್ದಿಷ್ಟಪಡಿಸಿರುವಂತೆ ವಿಶೇಷ ತರಬೇತಿಗಳನ್ನು ಒದಗಿಸಬೇಕು. |
| *(f)* | Ensure and monitor admission, attendance and completion of elementary education of every child; | ಪ್ರತಿಯೊಂದು ಮಗುವು ಶಾಲೆಗೆ ಪ್ರವೇಶವನ್ನು ಹೊಂದುವುದು, ಶಾಲೆಗೆ ಹಾಜರಾಗುವುದು ಮತ್ತು ಎಲಿಮೆಂಟರಿ ಶಿಕ್ಷಣವನ್ನು ಪೂರೈಸುವುದನ್ನು ಖಾತರಿ ಪಡಿಸಿಕೊಳ್ಳಬೇಕು. |
| *(g)* | Ensure good quality elementary education conforming to the standards and norms specified in the Schedule; | ಶೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಿರುವ ಮಾಪನಗಳು ಮತ್ತು ರೀತಿನೀತಿಯಂತೆ ಗುಣಮಟ್ಟದ ಎಲಿಮೆಂಟರಿ ಶಿಕ್ಷಣವನ್ನು ಒದಗಿಸುವುದನ್ನು ಖಾತರಿ ಪಡಿಸಿಕೊಳ್ಳಬೇಕು. |
| *(h)* | Ensure timely prescribing of curriculum and courses of study for elementary education; and | ಎಲಿಮೆಂಟರಿ ಶಿಕ್ಷಣಕ್ಕಾಗಿ ನಿರ್ದಿಷ್ಟಪಡಿಸಿದಂತಹ ಪಠ್ಯ ಪ್ರನಾಳಿಕೆಗಳು ಮತ್ತು ಕೋರ್ಸ್‌ಗಳ ಅಧ್ಯಯನವನ್ನು ಶಿಫಾರಸು ಮಾಡುವುದನ್ನು ಖಾತರಿ ಪಡಿಸಿಕೊಳ್ಳಬೇಕು. |
| *(i)* | Provide training facility for teachers; | ಶಿಕ್ಷಕರಿಗೆ ತರಬೇತಿಯ ಸೌಲಭ್ಯಗಳನ್ನು ಮಾಡಿಕೊಡುವುದು |

**9.** Every local authority shall

ಪ್ರತಿಯೊಂದು ಸ್ಥಳೀಯ ಸರ್ಕಾರವು,

Duties of local authority

ಸ್ಥಳೀಯ ಸರ್ಕಾರದ ಜವಾಬ್ದಾರಿ

*(a)* provide free and compulsory elementary education to every child;

ಪ್ರತಿಯೊಂದು ಮಗುವಿಗೆ ಉಚಿತ, ಕಡ್ಡಾಯ ಎಲಿಮೆಂಟರಿ ಶಿಕ್ಷಣವನ್ನು ಒದಗಿಸಬೇಕು :

Provided that where a child is admitted by his or her parents or guardian, as the case may be, in a school other than a school established, owned, controlled or substantially financed by funds provided directly or indirectly by the appropriate case may be, shall not be entitled to make a claim for reimbursement of expenditure incurred on elementary education of the child in such other school.

ಅಂದರೆ, ಯಾವುದೇ ತಂದೆ ತಾಯಿಯರು ಅಥವಾ ಪೋಷಕರು, ತಮ್ಮ ಮಗುವನ್ನು ಸಂಬಂಧಿಸಿದ ಸರ್ಕಾರ ಅಥವಾ ಸ್ಥಳೀಯ ಸರ್ಕಾರವು ಸ್ಥಾಪಿಸದ ಅದರ ಸಂಪೂರ್ಣ ಸ್ವಾಮ್ಯವನ್ನು ಹೊಂದಿಲ್ಲದ ಇಲ್ಲವೇ ನಿಯಂತ್ರಣದಲ್ಲಿದ, ಅಥವಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಣಕಾಸಿನ ನೆರವನ್ನು ನೀಡದ ಶಾಲೆಗೆ ಸೇರಿಸಿದ್ದಲ್ಲಿ, ಅಂತಹವರು ತಮ್ಮ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಮಾಡಿದ ವೆಚ್ಚವನ್ನು ಮರು ಪಾವತಿ ಮಾಡಿ ಎಂದು ಸರ್ಕಾರವನ್ನು ಕೇಳುವಂತಿಲ್ಲ.

*(b)* Ensure availability of a neighbourhood school as specified in section 6;

ಸೆಕ್ಷನ್ 6ರಲ್ಲಿ ನಿರ್ದಿಷ್ಟಪಡಿಸಿರುವಂತೆ ನೆರೆಹೊರೆ ಶಾಲೆಗಳನ್ನು ಒದಗಿಸಬೇಕು.

*(c)* Ensure that the child belonging to weaker section and the child belonging to disadvantaged group are not discriminate against and prevented from pursuing and completing elementary education on any grounds;

ದುರ್ಬಲ ವರ್ಗಗಳು, ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತಿರುವ ಸಮೂಹಗಳ ಮಕ್ಕಳು ಯಾವುದೇ 'ಈತಿಯ ತಾರತಮ್ಯಕ್ಕೆ ಗುರಿಯಾಗುವುದಾಗಲಿ ಮತ್ತು ಅದರಿಂದಾಗಿ ಎಲಿಮೆಂಟರಿ ಶಿಕ್ಷಣವನ್ನು ಪೂರೈಸಲು ತೊಂದರೆಯಾಯಿತು ಎಂಬುದನ್ನು ನಿವಾರಿಸುವುದನ್ನು ಖಾತರಿ ಪಡಿಸಿಕೊಳ್ಳಬೇಕು.

*(d)* Maintain records of children up to the age of fourteen years residing within its jurisdiction, in such manner as may be prescribed;

ತನ್ನ ಭೌಗೋಳಿಕ ಪ್ರದೇಶದಲ್ಲಿ ವಾಸವಾಗಿರುವ ಆರರಿಂದ ಹ ದಿನಾಲ್ಕು ವರ್ಷದೊಳಗಿನ ಎಲ್ಲ ಮಕ್ಕಳ ವಿವರಗಳನ್ನು ನಿರ್ದಿಷ್ಟ ಪಡಿಸಿದ ವಿಧಾನದಲ್ಲಿ ಇಟ್ಟುಕೊಳ್ಳಬೇಕು.

*(e)* Ensure and monitor admission, attendance and completion of elementary education of every child;

ಪ್ರತಿಯೊಂದು ಮಗುವು ಶಾಲೆಗೆ ಪ್ರವೇಶವನ್ನು ಹೊಂದುವುದು, ಶಾಲೆಗೆ ಹಾಜರಾಗುವುದು ಮತ್ತು ಎಲಿಮೆಂಟರಿ ಶಿಕ್ಷಣವನ್ನು ಪೂರೈಸುವುದನ್ನು ಉಸ್ತುವಾರಿ ಮಾಡುವುದನ್ನು ಖಾತರಿ ಪಡಿಸಿಕೊಳ್ಳಬೇಕು.

*(f)* Provide infrastructure including school building, teaching staff and learning equipment;

ಪಾಠಶಾಲೆಗೆ ಬೇಕಾದ ಕಟ್ಟಡ, ಶಿಕ್ಷಕ ವೃಂದ, ಕಲಿಕೆಯ ಸಾಮಗ್ರಿಗಳೇ ಮೊದಲಾದ ಮೂಲ ಸೌಕರ್ಯಗಳನ್ನು ಶಾಲೆಗಳಿಗೆ ಒದಗಿಸಬೇಕು.

*(g)* Provide special training facility specified in section 4;

ಸೆಕ್ಷನ್ 4ರಲ್ಲಿ ನಿರ್ದಿಷ್ಟಪಡಿಸಿರುವಂತೆ ವಿಶೇಷ ತರಬೇತಿಗಳನ್ನು ಒದಗಿಸಬೇಕು.

*(h)* Ensure good quality elementary education conforming to the standards and norms specified in the Schedule;

ಶೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಿರುವ ಮಾಪನಗಳು ಮತ್ತು ರೀತಿನೀತಿಯಂತೆ ಗುಣಮಟ್ಟದ ಎಲಿಮೆಂಟರಿ ಶಿಕ್ಷಣವನ್ನು ಒದಗಿಸುವುದನ್ನು ಖಾತರಿ ಪಡಿಸಿಕೊಳ್ಳಬೇಕು.

*(i)* Ensure timely prescribing of curriculum and courses of study for elementary education; and

ಎಲಿಮೆಂಟರಿ ಶಿಕ್ಷಣಕ್ಕಾಗಿ ನಿರ್ದಿಷ್ಟಪಡಿಸಿದಂತಹ ಪಠ್ಯ ಕ್ರಮ ಮತ್ತು ಕೋರ್ಸ್‌ಗಳ ಅಧ್ಯಯನವನ್ನು ಶಿಫಾರಸು ಮಾಡುವುದನ್ನು ಖಾತರಿ ಪಡಿಸಿಕೊಳ್ಳಬೇಕು.

*(j)* Provide training facility for teachers;

ಶಿಕ್ಷಕರಿಗೆ ತರಬೇತಿಯ ಸೌಲಭ್ಯಗಳನ್ನು ಮಾಡಿಕೊಡುವುದು

*(k)* Ensure admission of children of migrant families;

ವಲಸೆ ಹೋಗುವ ಕುಟುಂಬಗಳ ಮಕ್ಕಳು ಶಾಲೆಗೆ ಪ್ರವೇಶ ಪಡೆಯುವುದನ್ನು ಖಾತರಿ ಪಡಿಸಿಕೊಳ್ಳಬೇಕು.

*(l)* Monitor functioning of schools within its jurisdiction; and

ತನ್ನ ಭೌಗೋಳಿಕ ಪ್ರದೇಶದಲ್ಲಿ ಬರುವ ಎಲ್ಲ ಶಾಲೆಗಳ ಕೆಲಸವನ್ನು ಉಸ್ತುವಾರಿ ಮಾಡಬೇಕು.

*(m* Decide the academic calendar.

ಶಾಲಾ ಶೈಕ್ಷಣಿಕ ಕ್ಯಾಲೆಂಡರ್/ಪಂಚಾಂಗವನ್ನು ನಿರ್ಧರಿಸಬೇಕು.

| | | | | |
|---|---|---|---|---|
| **10** | Duties of parents and guardians | It shall be the duty of every parent or guardian to admit or cause to be admitted his or her child or ward, as the case may be, to an elementary education in the neighbourhood school. | ತಮ್ಮ ಮಕ್ಕಳನ್ನು ಅಥವಾ ತಮ್ಮ ಸಂರಕ್ಷಣೆಯಲ್ಲಿರುವ ಎಲ್ಲ ಮಕ್ಕಳನ್ನು ತನ್ನ ನೆರೆಹೊರೆಯಲ್ಲಿರುವ ಎಲಿಮೆಂಟರಿ ಶಿಕ್ಷಣಕ್ಕಾಗಿ ಶಾಲೆಗೆ ದಾಖಲಿಸುವುದು ಎಲ್ಲ ತಂದೆ ತಾಯಿಯರು ಮತ್ತು ಪೋಷಕರ ಕರ್ತವ್ಯ. | ಪೋಷಕರು ಮತ್ತು ತಂದೆ ತಾಯಿಯರ ಕರ್ತವ್ಯ |
| **11** | Appropriate Governemtn to providefor pre-school education | With a view to prepare children above the age of three years for elementary education and to provide early childhood care and education for all children until they complete the age of six years, the appropriate Government may make necessary arrangement for providing free pre-school education such children. | ಮೂರು ವರ್ಷವನ್ನು ದಾಟಿದ ಎಲ್ಲ ಮಕ್ಕಳನ್ನು ಮುಂದೆ ಎಲಿಮೆಂಟರಿ ಶಿಕ್ಷಣಕ್ಕೆ ಸೇರಿಸಲು ತಯ್ಯಾರು ಮಾಡುವ ಉದ್ದೇಶದಿಂದ, ಅವರಿಗೆ ಆರಂಭಿಕ ಬಾಲ್ಯ ಪೋಷಣೆ, ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಎಲ್ಲ ಮಕ್ಕಳಿಗೆ ಅವರು ಆರು ವರ್ಷವನ್ನು ದಾಟುವವರೆಗೆ ಸೂಕ್ತ ಸರ್ಕಾರಗಳು ಉಚಿತವಾಗಿ ಶಾಲಾ ಪೂರ್ವ ಶಿಕ್ಷಣದ ವ್ಯವಸ್ಥೆಗಳ ಮೂಲಕ ಮಾಡಿಕೊಡಬಹುದು. | ಸೂಕ್ತ ಸರ್ಕಾರಕ್ಕೆ ಪ್ರಾಥಮಿಕ ಪೂರ್ವ ಶಿಕ್ಷಣ ವ್ಯವಸ್ಥೆ ಮಾಡುವ ಜವಾಬ್ದಾರಿ |

## CHAPTER IV / ಅಧ್ಯಾಯ – IV

## RESPONSIBILITIES OF SCHOOL AND TEACHERS /ಶಾಲೆಗಳು ಮತ್ತು ಶಿಕ್ಷಕರ ಜವಾಬ್ದಾರಿಗಳು

**12.** *(1)* For the purposes of this Act, a school.-

Extent of school's responsibility for free and compulsory education

(a) Specified in sub-clause *(i)* of clause *(n)* of section 2 shall provide free and compulsory elementary education to all children admitted therein;

(b) Specified in sub-clause *(n)* of section 2 shall provide free and compulsory elementary education to such proportion of children admitted therein as it annual recurring aid or grants to received bears to its annual recurring expenses, subject to a minimum of twenty-five per cent.

(c) Specified sub-clause *(iii)* and *(iv)* of clause *(n)* of section 2 shall admit in class I, to the extent of at least twenty-five per cent of the strength of that class, children belonging to weaker section and disadvantaged group in the neighbourhood and provide free and compulsory elementary education till its completion;

Provided further that where a school specified in clause *(n)* of section 2 imparts pre-school education, the provisions of clauses *(a)* to *(c)* shall apply for admission to such pre-school education.

ಈ ಕಾಯಿದೆಯ ಉದ್ದೇಶದಿಂದ ಶಾಲೆಯು –

ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಶಾಲೆಗಿರುವ ಜವಾಬ್ದಾರಿಯ ವ್ಯಾಪ್ತಿ

a) ಸೆಕ್ಷನ್ 2 ಕ್ಲಾಜ್ (n) ರ ಉಪ-ಕ್ಲಾಜ್ (i) ರಂತೆ ತನ್ನಲ್ಲಿ ಪ್ರವೇಶವನ್ನು ಪಡೆದಿರುವ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಎಲಿಮೆಂಟರಿ ಶಿಕ್ಷಣವನ್ನು ಒದಗಿಸುವುದು;

b) ಸೆಕ್ಷನ್ 2 ಉಪ-ಕ್ಲಾಜ್ (n) ರಲ್ಲಿ ನಿರ್ದಿಷ್ಟ ಪಡಿಸಿರುವಂತೆ, ಪ್ರತಿ ವರ್ಷ ತನಗೆ ಸಿಗುವ ದೇಣಿಗೆ/ಗ್ರಾಂಟ್/ಏಯ್ಡ್ ನ ಪ್ರಮಾಣದಂತೆ ತನ್ನಲ್ಲಿ ಪ್ರವೇಶ ಪಡೆಯುವ ಒಟ್ಟು ಮಕ್ಕಳಲ್ಲಿ ಕನಿಷ್ಟ ಪ್ರತಿ ಶತ ಇಪ್ಪತ್ತೈದು ಭಾಗದಷ್ಟು ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಬೇಕು.

c) ಸೆಕ್ಷನ್ 2 ಕ್ಲಾಜ್ (n) ರ ಉಪ ಕ್ಲಾಜ್ (iii) ಹಾಗೂ (iv) ರಲ್ಲಿ ನಿರ್ದಿಷ್ಟ ಪಡಿಸಿರುವಂತೆ, ತನ್ನ ನೆರೆಹೊರೆಯಲ್ಲಿರುವ ಕನಿಷ್ಟ ಪ್ರತಿ ಶತ 25ರಷ್ಟು ದುರ್ಬಲ ವರ್ಗಗಳು ಮತ್ತು ಪ್ರತಿಕೂಲ ಪರಿಸ್ಥಿತಿಯಲ್ಲಿರುವ ವರ್ಗಗಳ ಮಕ್ಕಳನ್ನು 1ನೇ ತರಗತಿಗೆ ಸೇರಿಸಿಕೊಂಡು ಅವರಿಗೆ ಪ್ರಾಥಮಿಕ ಶಿಕ್ಷಣ ಪೂರೈಸುವವರೆಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಬೇಕು.

ಸೆಕ್ಷನ್ 2 ಕ್ಲಾಜ್ (n) ರಲ್ಲಿ ನಿ ರ್ದಿಷ್ಟಪಡಿಸಿರುವಂತೆ ಅಂತಹ ಶಾಲೆಗಳು ಮಕ್ಕಳಿಗೆ ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಒದಗಿಸುತ್ತಿದ್ದಲ್ಲಿ ಈ ಸೆಕ್ಷನ್ನಿನ ವರೆಗಿನ ಎಲ್ಲ ಅವಕಾಶಗಳನ್ನು ಪ್ರಾಥಮಿಕ ಪೂರ್ವ ತರಗತಿಗಳಿಗೆ ಮಕ್ಕಳನ್ನು ಸೇರಿಸಿಕೊಳ್ಳಲು ಕಡ್ಡಾಯವಾಗುತ್ತದೆ.

*(2)* The school specified in sub-clause (iv) of clause (n) of section 2 providing free and compulsory education as specified in clause (c) of sub-section (I) shall be reimbursed expenditure so incurred by it to the extent of per-child expenditure incurred by the State, or the actual amount charged from the child, whichever is less, in such manner as may be prescribed;

Provided that such reimbursement shall not exceed per-child-expenditure incurred by a school specified in sub clause *(i)* of clause *(n)* of Section 2

Provided further that where such school is already under obligation to provide free

ಸೆಕ್ಷನ್ 2 ಕ್ಲಾಜ್ (n) ರ ಉಪ-ಕ್ಲಾಜ್ (iv) ರಲ್ಲಿ ನಿರ್ದಿಷ್ಟ ಪಡಿಸಿರುವಂತೆ, ಯಾವುದಾದರೂ ಶಾಲೆ ರಂತೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುತ್ತಿದ್ದಲ್ಲಿ ಉಪ-ಕ್ಲಾಜ್ (I)ರ ಕ್ಲಾಜ್ (c)ರಂತೆ ಪ್ರತಿ ಮಗುವಿಗೆ ಸರ್ಕಾರವು ಶಿಕ್ಷಣ ಒದಗಿಸಲು ಎಷ್ಟು ಖರ್ಚು ಮಾಡುತ್ತದೋ ಅಥವಾ ಮಗುವಿಗೆ ಆ ಶಾಲೆ ಎಷ್ಟು ಶುಲ್ಕವನ್ನು ವಿಧಿಸುವುದೋ ಅವುಗಳಲ್ಲಿ ಯಾವುದು ಕಡಿಮೆ ಇರುವುದೋ ಅಷ್ಟು ಮೊತ್ತವನ್ನು ಆಯಾ ಶಾಲೆಗೆ ಸರ್ಕಾರವು ನಿರ್ದಿಷ್ಟ ಪಡಿಸಿದ ವಿಧಿವಿಧಾನದಂತೆ ಮರುಪಾವತಿ ಮಾಡುತ್ತದೆ.

ಆದರೆ, ಈ ರೀತಿ ಮರುಪಾವತಿ ಮಾಡುವ ಹಣ ಸೆಕ್ಷನ್ 2ರ ಕ್ಲಾಜ್ *(n)* ರ ಉಪ-ಕ್ಲಾಜ್ *(i)* ರಲ್ಲಿ ನಿರ್ದಿಷ್ಟ ಪಡಿಸಿರುವಂತೆ ಪ್ರತಿ ಮಗುವಿಗೆ ಆಗುವ ಖರ್ಚನ್ನು ಮೀರಬಾರದು.

ಆದರೆ, ಯಾವುದಾದರೂ ಶಾಲೆಯು ಉಚಿತ ಶಿಕ್ಷಣವನ್ನು ನಿರ್ದಿಷ್ಟ ಸಂಖ್ಯೆಯ ಮಕ್ಕಳಿಗೆ ಕೊಡಲು ಈಗಾಗಲೇ

education to a specific number of children on account of it having received any land, building, equipment or other facilities, either free of cost or at a concessional rate, such school shall not be entitled for reimbursement to the extent of such obligation.

ಬದ್ಧವಾಗಿದ್ದಲ್ಲಿ ಅಂದರೆ ಸರ್ಕಾರದಿಂದ ಭೂಮಿ, ಕಟ್ಟಡ, ಸಲಕರಣೆಗಳು ಅಥವಾ ಇನ್ನಿತರ ಸೌಕರ್ಯಗಳನ್ನು ಉಚಿತವಾಗಿ ಅಥವಾ ರಿಯಾಯತಿ ದರದಲ್ಲಿ ಪಡೆದಿದ್ದಲ್ಲಿ ಅಂತಹ ಶಾಲೆಗಳಿಗೆ ಮಕ್ಕಳ ಶಿಕ್ಷಣದ ಶುಲ್ಕವನ್ನು ಮರುಪಾವತಿ ಮಾಡಲು ಸರ್ಕಾರಕ್ಕೆ ಭಾದ್ಯತೆ ಇರುವುದಿಲ್ಲ.

(3) Every school shall provide such information as may be required by the appropriate Government or the local authority, as the case may be.

ಸರ್ಕಾರ ಅಥವಾ ಸ್ಥಳೀಯ ಸರ್ಕಾರವು ಅಪೇಕ್ಷಿಸುವ ಮಾಹಿತಿಯನ್ನು ಶಾಲೆಗಳು ಒದಗಿಸಬೇಕು.

**13** No capitation fee and screening provcedure for admission

ಶಾಲೆಗೆ ಪ್ರವೇಶ ಪಡೆಯಲು ಕ್ಯಾಪಿಟೇಷನ್ ಶುಲ್ಕ ಮತ್ತು ಪ್ರವೇಶ ಪರೀಕ್ಷೆ ಇರಬಾರದು.

(1) No school or person shall, while admitting a child, collect any capitation free and subject the child or his or her parents or guardian to any screening procedure;

ಯಾವುದೇ ಶಾಲೆ ಮಕ್ಕಳನ್ನು ತನ್ನಲ್ಲಿ ಸೇರಿಸಿಕೊಳ್ಳುವಾಗ ಯಾವುದೇ ರೀತಿಯ ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡಬಾರದು ಮತ್ತು ಮಗುವನ್ನು ಅಥವಾ ಮಗುವಿನ ಪೋಷಕರು, ತಾಯಿತಂದೆಯರನ್ನು ಯಾವುದೇ ರೀತಿಯ ಪ್ರವೇಶ ಪರೀಕ್ಷೆಯಂತಹ ವಿಧಾನಗಳಿಗೆ ಒಳಪಡಿಸಬಾರದು;

(2) Any school or person, if in contravention of the provisions of sub section (I), -

(a) receives capitation fee, shall be punishable with fine which may extend to ten times the capitation fee charged;

(b) subjects a child to screening procedure, shall be punishable with fine which may extent to twenty-five thousand rupees for the first contravention and fifty thousand rupees for each subsequent contraventions.

ಯಾವುದಾದರೂ ಶಾಲೆ ಈ ಮೇಲೆ ಹೇಳಿರುವ ಉಪ ಸೆಕ್ಷನ್ *(1)*ರ ಅವಕಾಶಗಳನ್ನು ಮೀರಿ -

(ಎ) ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೋಂಡಿದ್ದೇ ಆದಲ್ಲಿ ಆ ಶುಲ್ಕದ ಹತ್ತರಷ್ಟು ಪ್ರಮಾಣದಲ್ಲಿ ದಂಡವನ್ನು ತೆತ್ತಬೇಕಾಗುತ್ತದೆ.

(ಬಿ) ಮಕ್ಕಳನ್ನು ಪ್ರವೇಶ ಪರೀಕ್ಷೆಯಂತಹದಕ್ಕೆ ಒಳಪಡಿಸಿದ್ದೇ ಆದಲ್ಲಿ ಮೊದಲ ಬಾರಿ ರೂ.25,000 ಮತ್ತು ಅದನ್ನು ಮತ್ತೆ ಮತ್ತೆ ಮೀರಿದಲ್ಲಿ ಪ್ರತಿ ಬಾರಿ ರೂ.50,000ದ ದಂಡವನ್ನು ತೆತ್ತಬೇಕಾಗುತ್ತದೆ.

**14** Proof of age for admission

ಪ್ರವೇಶ ಪಡೆಯಲು ವಯಸ್ಸಿನ ಪುರಾವೆ.

(1) For the purposes of admission to elementary education, the age of a child shall be determined on the basis of the birth certificate issued in accordance with the provisions of the Births, Deaths and Marriages Registration Act, 1886 or on the basis of such other documents, as may be prescribed.

ಮಕ್ಕಳನ್ನು ಎಲಿಮೆಂಟರಿ ಶಾಲೆಗೆ ಸೇರಿಸುವ ಸಮಯದಲ್ಲಿ ಮಗುವಿನ ವಯಸ್ಸನ್ನು ನಿರ್ಧರಿಸಲು ಜನನ, ಮರಣ ಮತ್ತು ವಿವಾಹ ದಾಖಲೆ ಕಾಯಿದೆ 1886ರಂತೆ ನೀಡುವ ಜನನ ಪ್ರಮಾಣ ಪತ್ರಗಳು ಅಥವಾ ಇನ್ನಿತರ ಅದೇ ರೀತಿಯ ದಾಖಲೆಗಳನ್ನು ಆಧರಿಸಬಹುದು.

(2) No child shall be denied admission in a school for lack of age proof.

ಮಗುವಿನ ವಯಸ್ಸನ್ನು ನಿರ್ಧರಿಸುವ ಪ್ರಮಾಣ ಪತ್ರಗಳು ಇಲ್ಲವೆಂಬ ಒಂದೇ ಕಾರಣಕ್ಕೆ ಯಾವುದೇ ಮಗುವಿಗೆ ಶಾಲಾ ಪ್ರವೇಶವನ್ನು ನಿರಾಕರಿಸುವಂತಿಲ್ಲ.

**15.** A child shall be admitted in a school at the commencement of the academic year or within such extended period as may be prescribed:

ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ಅಥವಾ ಸರ್ಕಾರದ ನಿರ್ಧಾರದಂತೆ ಮುಂದುವರೆಸಿದ ಸಮಯದೊಳಗೆ ಮಕ್ಕಳನ್ನು ಶಾಲೆಗೆ ಸೇರಿಸಬೇಕು.

Provided that no child shall be denied admission if such admission is sought subsequent to the extended period;

ಆದರೆ, ಈ ರೀತಿ ಮುಂದುವರೆಸಿದ ಸಮಯದ ಮೇಲೂ ಮಕ್ಕಳು ಪ್ರವೇಶವನ್ನು ಅಪೇಕ್ಷಿಸಿದ್ದಲ್ಲಿ ಅದನ್ನು ನಿರಾಕರಿಸುವಂತಿಲ್ಲ.

Provided further that any child admitted after the extended period shall complete his studies in such manner as may be prescribed by the appropriate Government.

ಆದರೆ, ಈ ರೀತಿಯ ಮುಂದುವರೆಸಿದ ಸಮಯದ ಮೇಲೆ ಶಾಲೆಯನ್ನು ಸೇರುವ ಮ್ಕಕಳು, ಸರ್ಕಾರವು ನಿರ್ಧರಿಸಿದ ರೀತಿಯಲ್ಲಿ ತನ್ನ ಶಿಕ್ಷಣವನ್ನು ಪೂರೈಸಲು ಅವಕಾಶವಿರುತ್ತದೆ.

Prohibition of holding back and expulsion.

**16.** No child admitted in a school shall be held back in any class or expelled from school till the completion of elementary education

ಯಾವುದೇ ಮಗುವನ್ನು ಯಾವುದೇ ಕಾರಣಕ್ಕೂ ಯಾವುದೇ ತರಗತಿಯಲ್ಲಿ ನಪಾಸು ಮಾಡಿ ಉಳಿಸಿಕೊಳ್ಳುವಂತಿಲ್ಲ ಮತ್ತು ಎಲಿಮೆಂಟರಿ ಶಿಕ್ಷಣ ಪೂರೈಸುವ ತನಕ ಶಾಲೆಯಿಂದ ಹೊರಹಾಕುವಂತಿಲ್ಲ.

ನಪಾಸು ಮಾಡುವ ಮತ್ತು ಶಾಲೆಯಿಂದ ಹೊರಹಾಕುವುದಕ್ಕೆ ನಿಷೇಧ

Prohibition of physical punishment and mental harassment to child

**17.** (1) No child shall be subjected to physical punishment or mental harassment;

ಯಾವುದೇ ಮಗುವನ್ನು ದೈಹಿಕ ಶಿಕ್ಷೆ ಅಥವಾ ಮಾನಸಿಕ ಕ್ಷೋಭೆಗೆ ಗುರಿಮಾಡಬಾರದು;

(2) Whoever contravene the provisions of sub-section *(l)* shall be liable to disciplinary action under the service rules applicable to such person.

ಯಾರೇ ಆಗಲಿ ಈ ಉಪ–ಸೆಕ್ಷನ್ *(1)* ನ್ನು ಮೀರಿದ್ದೇ ಆದಲ್ಲಿ ಸೇವಾ ನಿಯಮಗಳಲ್ಲಿರುವಂತೆ ಕ್ರಮಕ್ಕೆ ಗುರಿಯಾಗುವರು.

ದೈಹಿಕ ಶಿಕ್ಷೆ ಮತ್ತು ಮಾನಸಿಕ ಕ್ಷೋಭೆ ಮಾಡುವುದಕ್ಕೆ ನಿಷೇಧ

Norms and standards for school

No school to be established without obtaining certificate of recognition

**18.** (1) No school other than a school established, owned or controlled by the appropriate government or the local authority shall, after the commencement of this Act, be established or function, without obtaining a certificate of recognition from such authority, by making an application in such form and manner, as may be prescribed.

ಸರ್ಕಾರ ಮತ್ತು ಸ್ಥಳೀಯ ಸರ್ಕಾರಗಳು ಸಂಪೂರ್ಣವಾಗಿ ಸ್ವಾಮಿತ್ವವನ್ನು ಹೊಂದಿರುವ ಮತ್ತು ಆರಂಭಿಸಿರುವ ಶಾಲೆಗಳನ್ನು ಹೊರತುಪಡಿಸಿ ಬೇರೆ ಯಾರೇ ಆಗಲಿ, ಈ ಕಾಯಿದೆಯು ಆರಂಭವಾದ ಮೇಲೆ ಸರ್ಕಾರದ ಮನ್ನಣೆಗಾಗಿ ಅರ್ಜಿ ಸಲ್ಲಿಸಿ ಮನ್ನಣೆ ಪಡೆಯಬೇಕು ಮತ್ತು ಅಂತಹ ಮನ್ನಣೆ ಇಲ್ಲದೆ ಶಾಲೆಗಳನ್ನು ಆರಂಭಿಸುವಂತಿಲ್ಲ.

ಶಾಲೆಗಳನ್ನು ನಡೆಸಲು ಕನಿಷ್ಟ ಮಾಪಕಗಳು ಮತ್ತು ನಿಯಮಗಳು

(2) The authority prescribed under sub-section (1) shall issue the certificate of recognition in such form, within such period, in such manner and subject to such conditions as may be prescribed:

ಈ ಮೇಲಿನ ಉಪ–ಸೆಕ್ಷನ್ *(1)* ರಲ್ಲಿ ಸೂಚಿಸಿರುವಂತೆ ನಿ ರ್ದಿಷ್ಟ ಪಡಿಸಿದ ಅಧಿಕಾರವು ನಿರ್ದಿಷ್ಟ ಸಮಯದೊಳಗೆ ಮತ್ತು ನಿರ್ದಿಷ್ಟ ಪಡಿಸಿದ ನಿಯಮಗಳಂತೆ ಮನ್ನಣೆಯನ್ನು ನೀಡುತ್ತದೆ;

ಸರ್ಕಾರದ ಅಧಿಕೃತ ಮನ್ನಣೆಯಿಲ್ಲದೆ ಯಾರೇ ಆಗಲಿ ಶಾಲೆಗಳನ್ನು ತಎಎಯುವಂತಿಲ್ಲ.

Provided that no such recognition shall be granted to a school unless it fulfils norms and standards specified under section 19.

ಆದರೆ, ಸೆಕ್ಷನ್ 19ರಲ್ಲಿ ಸೂಚಿಸಿರುವ ನಿಯಮಗಳು ಮತ್ತು ಮಾಪನಗಳನ್ನು ಒಪ್ಪದ ಹೊರತು ಯಾವುದೇ ಶಾಲೆಗೆ ಮನ್ನಣೆಯನ್ನು ನೀಡಲಾಗುವುದಿಲ್ಲ.

(3) On the Contravention of the Conditions of Recognition, the prescribed authority shall, by an order in writing, withdraw recognition Provided that such order shall contain a direction as to which of the neighborhood school, the children studying in the derecognized school, Shall be admitted:

ಈ ನಿಯಮಗಳನ್ನು ಮೀರಿದ್ದೇ ಆದಲ್ಲಿ, ನಿರ್ದಿಷ್ಟವಾದ ಅ ಧಿಕಾರವನ್ನು ನೀಡಿರುವ ಪ್ರಾಧಿಕಾರವು, ಲಿಖಿತ ನಿರ್ದೇಶನವನ್ನು ನೀಡಿ ಅಂತಹ ಶಾಲೆಗಳಿಗೆ ನೀಡಿರುವ ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಂಡು, ಹಾಗೆ ಮನ್ನಣೆ ಕಳೆದುಕೊಂಡ ಶಾಲೆಯಲ್ಲಿ ಅಧ್ಯಯನ ಮಾಡುತ್ತಿರುವ ಮಕ್ಕಳನ್ನು ಅಲ್ಲಿಯೇ ಇರಬಹುದಾದ ನೆರೆಹೊರೆಯ ಶಾಲೆಗೆ ಸೇರಿಸಿಕೊಳ್ಳಲು ನಿರ್ದೇಶನ ನೀಡಬೇಕು.

Provided further that no recognition shall be so withdrawn without giving an opportunity of being heard to such school, in such manner. As may be prescribed.

ಆದರೆ, ಯಾವುದೇ ಶಾಲೆಗೆ ಹೀಗೆ ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಳ್ಳುವ ಸಂದರ್ಭದಲ್ಲಿ, ಆಯಾ ಶಾಲೆಗೆ ಮನ್ನಣೆಯನ್ನು ಏಕೆ ರದ್ದುಪಡಿಸಬಾರದು ಎಂಬ ವಿವರಣೆಯನ್ನು ನೀಡಲು ಅವಕಾಶವನ್ನು ನೀಡದೆ ಕ್ರಮ ಕೈಗೊಳ್ಳಬಾರದು.

(4) With effect from the date of withdrawal of the recognition under sub-section (3), no such school shall continue to function.

ಉಪ–ಸೆಕ್ಷನ್ *(3)* ರಂತೆ ಯಾವುದಾದರೂ ಶಾಲೆಗೆ ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಂಡ ಮೇಲೆ ಅಂತಹ ಶಾಲೆಗಳು ಯಾವುದೇ ಕಾರಣಕ್ಕೂ ಮುಂದುವರಿಯುವಂತಿಲ್ಲ.

(5) Any person who establishes or runs a school without obtaining certificate of recognition, or continues to run a school after withdrawal of recognition, shall be liable to fine which may extend to one lakh rupees for each day during which such

ಮೇಲೆ ಹೇಳಿದಂತೆ ಶಾಲೆಗೆ ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಂಡು ಅದು ಅನಧಿಕೃತ ಶಾಲೆ ಎಂದು ಘೋಷಿಸಿದ ಮೇಲೂ ಅಂತಹ ಶಾಲೆಯನ್ನು ನಡೆಸುವ ಯಾವುದಾದರೂ ವ್ಯಕ್ತಿ ಅಥವಾ ಶಾಲೆಗೆ ಅಂತಹ ನಿರ್ದೇಶನವನ್ನು ಮೀರುವ ಪ್ರತಿ ದಿನ ಒಂದಕ್ಕೆ ಒಂದು ಲಕ್ಷ ರೂಪಾಯಿಯಷ್ಟು

contravention continues.

ದಂಡವನ್ನು ವಿಧಿಸಬಹುದು.

**19. Norms and standards for school**

**ಶಾಲೆಗಳನ್ನು ನಡೆಸಲು ಕನಿಷ್ಠ ಮಾಪಕಗಳು ಮತ್ತು ನಿಯಮಗಳು**

